ಅನಿಕೇತನ

ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

ANIKETANA

Dr. Manmohan Singh
Bengaluru City University

ಸಂಪುಟ 01 | ಸಂಚಿಕೆ 04 | ಬೆಂಗಳೂರು | February 2026 | ಪುಟ 01

Monthly Campus Journal by the Department of Mass Communication and Journalism. (For Private Circulation Only)

# “ಸೌಹಾರ್ದತೆ –ಮಾನವೀಯತೆ: ಭಾರತೀಯ ಅಸ್ಮಿತೆಗೆ ನೈಜ ಸುರಕ್ಷತೆ”

**ವರದಿ: ಡಾ. ತೇಜೇಶ್ವರ. ಐ.ಎಸ್.**

ಡಾ. ಮನ್‌ಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಗಡಿಯಾರ ಗೋಪುರದ ಮುಂಭಾಗದಲ್ಲಿ 77ನೇ ಗಣರಾಜ್ಯೋತ್ಸವವನ್ನು“ಸೌಹಾರ್ದತೆ ಮತ್ತು ಮಾನವೀಯತೆ–ಭಾರತೀಯ ಅಸ್ಮಿತೆಯ ರಕ್ಷಣೆಗೆ ಅತ್ಯವಶ್ಯಕ”ಎಂಬ ಶೀರ್ಷಿಕಯಡಿ ಅರ್ಥಪೂರ್ಣವಾಗಿ ಆಚ–ರಿಸಲಾಯಿತು.


ವಿಶ್ವವಿದ್ಯಾಲಂಯುದ ಕುಲಪತಿಗಳಾದ ಪ್ರೊ. ರಮೇಶ್ ಬಿ. ಸರ್ಕಾರಿ ಕಲಾ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಿಂದ ಗೌರವ ರಕ್ಷೆ ಸ್ವೀಕರಿಸಿ ಎನ್‌ಎಸ್–ಎಸ್ ಪಥಸಂಚಲನ ವೀಕ್ಷಿಸಿದ ಬಳಿಕ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ದರು. ನಂತರ ಮಾತನಾಡಿದ ಅವರು ಒಟ್ಟಾರೆ ಶಿಕ್ಷಣ ದಾಖಲಾತಿ ಪ್ರಮಾಣ ಮತ್ತು ಉನ್ನತ ಶಿಕ್ಷಣ ಹಂತದಲ್ಲಿ ಕಡಿಮೆ ದಾಖಲಾತಿ ನಡುವಿನ ಅಂತರದ ಬಗ್ಗೆ ಪ್ರಸ್ತಾಪಿಸಿದರು. ಈ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳ ಪಾತ್ರದ ಬಹುಮುಖ್ಯವೆಂದು ಅವರು ಅಭಿಪ್ರಾಯಪಟ್ಟರು. ರಾಜಪ್ರಭುತ್ವ ವ್ಯವಸ್ಥೆಯಿಂದ ಚುನಾವಣಾ ಪ್ರಕ್ರಿಯೆ ಮೂಲಕ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ನಡೆದ ಸಂವಿಧಾನಾತ್ಮಕ ಬದಲಾವಣೆ ಕುರಿತು ಅವರು ಇದೇ ವೇಳೆ ಉಲ್ಲೇಖಿಸಿದರು. ಸಮಕಾಲೀನ ಶಿಕ್ಷಣ ಹಾಗೂ ಸಾಮಾಜಿ–ಕ ಸವಾಲುಗಳನ್ನು ಪರಿಹ–

## 77ನೇ ಗಣರಾಜ್ಯೋತ್ಸವ ದಿನಾಚರಣೆ

ರಿಸುವುದು ಜ್ಞಾನಕೇಂದ್ರಗಳಾದ ವಿಶ್ವವಿದ್ಯಾಲಯಗಳ ಬಹುದೊಡ್ಡ ಜವಾಬ್ದಾರಿಯಾಗಿದೆ ಎಂದು ಕುಲಪತಿಗಳು ವಿವರಿಸಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಸರ್ಕಾರದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್. ಎ.ಅಹ್ಮದ್ ಮಾತನಾಡಿ, ಶಿಕ್ಷಣದ ಗುಣಮಟ್ಟ ಹೆಚ್ಚಾಗುತ್ತಿದ್ದರೂ ಮಾನವೀಯ ಮೌಲ್ಯಗಳಲ್ಲಿ ಕುಸಿತ ಕಂಡುಬರುತ್ತಿರುವುದು ಆತಂಕಕಾರಿ ವಿಷಯವೆಂದು ಪ್ರತಿಪಾದಿಸಿದರು. ಯುವ ಪೀಳಿಗೆಯಲ್ಲಿ ಮಾನವೀಯ ಗುಣಗಳನ್ನು ಬೆಳೆಸುವ ಜವಾಬ್ದಾರಿ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲಿದ್ದು ಇಂತಹ ಮೌಲ್ಯಗಳು ಭಾರತೀಯ ಸಂವಿಧಾನದಲ್ಲೇ ಅಂತರ್ಗತವಾಗಿವೆ ಎಂದು ಅವರು ತಿಳಿಸಿದರು. ಸಂವಿಧಾನಾತ್ಮಕ ಹಕ್ಕುಗಳನ್ನು ಅನುಭವಿಸುವ ಜೊತೆಗೆ, ಕರ್ತವ್ಯಗಳನ್ನು ಪ್ರೀತಿಯಿಂದ, ತ್ಯಾಗದಿಂದ ಹಾಗೂ ಸಕ್ರಿಯವಾಗಿ ನಿರ್ವಹಿಸುವುದು ರಾಷ್ಟ್ರ ನಿರ್ಮಾಣ–ಕ್ಕೆ ಅಗತ್ಯವೆಂದು ಅವರು ಒತ್ತಿ ಹೇಳಿದರು. ವಿದ್ಯಾರ್ಥಿಗಳಲ್ಲಿ ಸೂಕ್ತ ಭಾಷಾ ಶೈಲಿ ಮತ್ತು ಪುಸ್ತಕಗಳನ್ನು ಓದುವ ಅಭ್ಯಾಸ ರೂಢಿಸುವುದು ಹಾಗೂ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದರ ಮಹತ್ವವನ್ನು ಅವರು ವಿವರಿಸಿದರು.

ಕುಲಸಚಿವರಾದ ಎ. ನವೀನ್ ಜೋಸೆಫ್ ಪ್ರಾರಂಭದಲ್ಲಿ ಸ್ವಾಗತಿಸಿದರು. ಪ್ರಸಾರಾಂಗ ನಿರ್ದೇಶಕ ಡಾ.ತಾಂಡವಗೌಡ ಅವರು ವಂದಿಸಿದರು. ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್ .ಬಿ. ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ..ಮಂಜು ಸಿ.ಎನ್ ಮತ್ತು ಡಾ. ಪ್ರಭು ಬಿ.ಎಂ. ಸಂವಿಧಾನಗೀತೆಯನ್ನು ಪ್ರಸ್ತುತಪಡಿಸಿದರು.ಡಾ.ಸದಾನಂದ ಕಾರ್ಯಕ್ರಮ ನಿರೂಪಿಸಿದರು. ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ವಿವಿಧ ನಿಕಾಯಗಳ ಡೀನರು, ಬೋಧಕ–ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.




ಗಣರಾಜ್ಯೋತ್ಸವ ಸಮಾರಂಭದಲ್ಲಿ ಕುಲಪತಿ ಪ್ರೊ. ರಮೇಶ್.ಬಿ. ಮತ್ತು ಮುಖ್ಯ ಅತಿಥಿಗಳಾದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್. ಎ. ಅಹ್ಮದ್ ಜೊತೆಗೆ ವಿವಿಧ ನಿಕಾಯಗಳ ಡೀನರು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು.

# ಭಾವೈಕ್ಯತೆಯ ರಕ್ಷಣೆ ಯುವ ಪೀಳಿಗೆಯ ಹೊಣೆ–ಬರಗೂರು ರಾಮಚಂದ್ರಪ್ಪ ಅಭಿಮತ

**–ಡಾ. ಗಂಗಪ್ಪ, ಉಪನ್ಯಾಸಕರು.**

ಪ್ರಗತಿಪರ ಚಿಂತಕರಾದ ಬಂಡಾಯ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪನವರ "ಸೌಹಾರ್ದ ಭಾರತ” ಕೃತಿಯನ್ನು ಜನವರಿ 10ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ಬಿಡುಗಡೆ ಮಾಡಲಾಯಿತು. ‘ಜನ ಪ್ರಕಾಶನ’, ‘ಸೌಹಾರ್ದ ಕರ್ನಾಟಕ’ ಮತ್ತು ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನೂತನ ಪ್ರಸಾರಾಂಗದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಏಕಕಾಲಕ್ಕೆ ರಾಜ್ಯದ 23 ಸ್ಥಳಗಳಲ್ಲಿ ಬಿಡುಗಡೆಗೊಂಡ ಈ ಪುಸ್ತಕವನ್ನು ಕುಲಪತಿಗಳಾದ ಪ್ರೊ. ರಮೇಶ್.ಬಿ. ಜನಾರ್ಪಣೆಗೊಳಿಸಿದರು.

ಜಾತಿ, ಧರ್ಮ, ಭಾಷೆಗಳ ಸಂಘರ್ಷದ ತಲ್ಲಣಗಳಿಂದಾಗಿ ದೇಶದಲ್ಲಿ ಸಾಮಾಜಿಕ ವಿಘಟನೆಯ ಆತಂಕಕಾರಿ ವಾತಾವರಣ ನಿರ್ಮಾಣವಾಗಿರುವ ಸದ್ಯದ ಸಂದರ್ಭದಲ್ಲಿ ಸೌಹಾರ್ದತೆ ಮತ್ತು ಸಮಾನತೆ ಮೌಲ್ಯಗಳು ಅತ್ಯಂತ ಪ್ರಸ್ತುತವಾಗಿವೆ ಎಂದು ಅವರು ವಿಶ್ಲೇಷಿಸಿದರು. ದೇಶದಲ್ಲಿ ಹೆಚ್ಚುತ್ತಿರುವ ಸಾಮಾಜಿಕ ಕ್ಷೋಭೆಯ ಬಗ್ಗೆ ಅಪಾರ ಕಳವಳ ವ್ಯಕ್ತಪಡಿಸಿದ ಕುಲಪತಿಗಳು ಸಂಕುಚಿತ ಮನೋಭಾವವನ್ನು ಮೆಟ್ಟಿನಿಂತು ಮಾನವೀಯ ಮೌಲ್ಯಾಧಾ–ರಿತ ವ್ಯಕ್ತಿತ್ವ ಮತ್ತು ನಾಯಕತ್ವ ಬೆಳೆಸಿಕೊಂಡು ಅಕ್ಷರ ಕ್ರಾಂತಿಯ ನಿಯೋಗಿಗಳಾಗುವಂತೆ ವಿದ್ಯಾರ್ಥಿಗಳನ್ನುಪ್ರೇರೇಪಿಸಿದರು.




ನಾಡೋಜ ಬರಗೂರು ರಾಮಚಂದ್ರಪ್ಪನವರ “ಸೌಹಾರ್ದ ಭಾರತ” ಕೃತಿಯ ಜನಾರ್ಪಣೆ

ಆಶಯ ಭಾಷಣ ಮಾಡಿದ ಬರಗೂರು ರಾಮಚಂದ್ರಪ್ಪನವರು, ಮಾನವತಾವಾದ ಮತ್ತು ಮೂಲಭೂತವಾದದ ನಡುವಿನ ಸಂಘರ್ಷ ತಾರಕಕ್ಕೇ–ರಿರುವ ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡಬೇಕಾದ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದರು. ಪುರೋಹಿತಶಾಹಿ ಮತ್ತು ಬಂಡವಾಳಶಾಹಿ ಶಕ್ತಿಗಳ ಸವಾಲುಗಳನ್ನು ಏಕಕಾಲದಲ್ಲಿ ಎದುರಿಸಬೇಕಾಗಿರುವ ಸಂದರ್ಭದಲ್ಲಿ ‘ಸೌಹಾರ್ದ ಭಾರತ’ದ ಪರಿಕಲ್ಪನೆಯ ಸಂದೇಶ ಜನಾಕ್ಷರ ಅಂದೋಲನವಾಗಿ ರೂಪುಗೊಳ್ಳಬೇಕೆಂದು ಅವರು ಪ್ರತಿಪಾದಿಸಿದರು. ದಂಡಿ ಸತ್ಯಾಗ್ರಹದ ವೇಳೆ ಗಾಂಧೀಜಿಯವರು ಒಂದು ಹಿಡಿ ಉಪ್ಪನ್ನು ಹಾಗೂ ಮಹಾಡ್ ಸತ್ಯಾಗ್ರಹದ ವೇಳೆ ಅಂಬೇಡ್ಕರ್ ಅವರು ಒಂದು ಬೊಗಸೆ ನೀರನ್ನು ಎತ್ತಿಹಿಡಿಯುವ ಮೂಲಕ ಸಾರ್ವತ್ರಿಕ ನೆಲೆಗಟ್ಟಿನ ತಮ್ಮ ಆಂದೋಲನದ ಅರ್ಥಪೂರ್ಣ ಸಂಕೇತಗಳಾಗಿ ಅವುಗಳನ್ನು ಬಳಸಿದರೆಂದು ಅವರು ವಿವರಿಸಿದರು. ಪಂಪನ ‘ಮನುಷ್ಯ ಜಾತಿ ತಾನೊಂದೇ ವಲಂ’ ಎಂಬ ನುಡಿಮುತ್ತುಗಳನ್ನು ಪ್ರಸ್ತಾಪಿಸಿದ ಅವರು ಬುದ್ಧ, ಬಸವಾದಿ ಶರಣರ ತತ್ವ–ಚಿಂತನೆಗಳ ಪರಂಪರೆಯನ್ನು ಯುವ ಪೀಳಿಗೆಗೆ ತಲುಪಿಸಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಇತ್ತೀಚೆಗೆ ಗೌರವ ಡಾಕ್ಟರೇಟ್ ಹಾಗೂ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾದ ಕನ್ನಡ ಚಲನಚಿತ್ರ ರಂಗದ ಮೂವರು ಗಣ್ಯರಾದ ಡಾ.ರಾಜೇಂದ್ರಸಿಂಗ್ ಬಾಬು, ಡಾ.ಜಯಮಾಲಾ ಮತ್ತು ಸುಂದರರಾಜ್ ಅವರನ್ನು ಅಭಿನಂದಿಸಿದ ಬರಗೂರು ರಾಮಚಂದ್ರಪ್ಪನವರು ಪುಸ್ತಕದ ಗೌರವ ಪ್ರತಿಗಳನ್ನು ಅರ್ಪಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷರಾದ ಡಾ. ಎಚ್.ಎಲ್.ಪುಷ್ಪ ಮಾತನಾಡಿ ದ್ವೇಷದ ಪರಾಕಾಷ್ಠೆಯ ಸದ್ಯದ ಪರಿಸ್ಥಿತಿಯಲ್ಲಿ ಜನರಲ್ಲಿ ವೈಚಾರಿಕ ಜಾಗೃತಿಯನ್ನು ಮೂಡಿಸುವ ತುರ್ತು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ರಾಜ್ಯದ ವಿವಿಧೆಡೆ ನಡೆಯುತ್ತಿರುವ ಮರ್ಯಾದೆ ಹತ್ಯೆ ಪ್ರಕರಣಗಳ ಬಗ್ಗೆ ವಿಶೇಷ ಗಮನ ಸೆಳೆದ ಅವರು ಈ ಸಂಬಂಧ ಕರ್ನಾಟಕ ಸರ್ಕಾರ ಇತ್ತೀಚೆಗೆ ರೂಪಿಸಿರುವ ನೂತನ ಕಾನೂನನ್ನು ಕಟ್ಟುನಿಟ್ಟಾಗಿ ಜಾ–ರಿಗೊಳಿಸಬೇಕೆಂದು ಇದೇ ವೇಳೆ ಆಗ್ರಹಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ವಿಧಾನಸಭಾಧ್ಯಕ್ಷರಾದ ಕೆ.ಆರ್. ರಮೇಶ್‌ಕುಮಾರ್ ಮಾತನಾಡಿ, ರಾಮಜನ್ಮಭೂಮಿ ಚಳವಳಿ ಮೂಲಕ ರಕ್ತಪಾತದ ರಾಜಕಾರಣಕ್ಕೆ ನಾಂದಿ ಹಾಡಿದ ಮತಾಂಧ ಶಕ್ತಿಗಳು ದೇಶದಲ್ಲಿ ಅಸಹಿಷ್ಣುತೆಯ ವಾತಾವರಣ ಸೃಷ್ಟಿಸಿದ್ದಾರೆಂದು ಟೀಕಿಸಿದರು. “ಧರ್ಮಗಳಿರುವುದು ಮನುಷ್ಯ–ರಿಗಾಗಿಯೇ ವಿನಹ ಧರ್ಮಕ್ಕಾಗಿ ಮನುಷ್ಯರಲ್ಲ” ಎಂಬ ಬಿ.ಆರ್. ಅಂಬೇಡ್ಕರ್ ಅವರ ನಿಲುವನ್ನು ಸಮರ್ಥಿಸಿದ ಅವರು ದ್ವೇಷ ರಾಜಕಾರಣವನ್ನು ಹಿಮ್ಮೆಟ್ಟಿಸಿ ಸೌಹಾರ್ದ ಭಾರತವನ್ನು ಕಟ್ಟಲು ಎಲ್ಲ ನೈಜ ದೇಶಪ್ರೇಮಿಗಳೂ ಮುಂದಾಗಬೇಕೆಂದು ಮನವಿ ಮಾಡಿದರು.

ವಿವಿಧ ಜನಪರ ಸಂಘಟನೆಗಳ ಪ್ರತಿನಿಧಿಗಳಾದ ಮಾವಳ್ಳಿ ಶಂಕರ್, ಡಾ. ಮೋಹನ್ ರಾಜ್, ಜ್ಯೋತಿ ಅನಂತಸುಬ್ಬರಾವ್, ಮಲ್ಲಿಗೆ, ಡಾ. ಎಸ್.ವೈ.ಗುರುಶಾಂತ್, ರಾಜಶೇಖರಮೂರ್ತಿ ಮತ್ತು ಪ್ರಸಾರಾಂಗ ನಿರ್ದೇಶಕರಾದ ಡಾ. ಟಿ.ಎನ್.ತಾಂಡವಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಾ.ಅಖ್ತರ್ ಮತ್ತು ಡಾ.ಮಂಜು ಸಿ.ಎನ್. ಕಾರ್ಯಕ್ರಮ ನಿರೂಪಿಸಿದರು.

## ಹುತಾತ್ಮ ದಿನಾಚರಣೆ– ಮಹಾತ್ಮ ಗಾಂಧೀಜಿಗೆ ಸಂಗೀತ ನಮನ

–ಡಾ. ಪ್ರವೀಣ ಡಿ. ಎಸ್.

ಸರ್ವೋದಯ ದಿನಾಚರಣೆಯ ಅಂಗವಾಗಿ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. "ಗಾಂಧಿ, ಸಂಗೀತ ಮತ್ತು ನಾಗರಿಕತೆಯ ಬಹುತ್ವ" ಎಂಬ ಶೀರ್ಷಿಕೆಯ ಈ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದ ಸರ್ವೋದಯ ಇಂಟರ್ ನ್ಯಾಷನಲ್ ಟ್ರಸ್ಟ್ ನ ಅಧ್ಯಕ್ಷರಾದ ಪ್ರೊ. ಡಿ.ಜೀವನ್‌ಕುಮಾರ್‌ರವರು ಸ್ವಾತಂತ್ರ್ಯ ಚಳವಳಿಯಲ್ಲಿ ಸಂಗೀತವೂ ಮಹತ್ವದ ಪಾತ್ರ ವಹಿಸಿತ್ತೆಂದು ತಿಳಿಸಿದರು. ಮಹಾತ್ಮ ಗಾಂಧಿಯವರು ಸಬರಮತಿ ಆಶ್ರಮದಲ್ಲಿ ಪ್ರತಿದಿನ ಭಜನೆಗಳ ಮೂಲಕ ಸರ್ವಧರ್ಮ ಸಮನ್ವಯದ ಸಂದೇಶವನ್ನು ಸಾರುವ ಮೂಲಕ ರಾಷ್ಟ್ರೀಯ ಭಾವೈಕ್ಯತೆಗೆ ಭದ್ರ ಬುನಾದಿ ಹಾಕಿಕೊಟ್ಟರೆಂದು ಅವರು ತಿಳಿಸಿದರು. ಬಹುಮುಖಿ ಸಂಸ್ಕೃತಿಯ ಭಾರತೀಯ ನಾಗರಿಕತೆಯ ಆದರ್ಶಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಂಡು ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು. ವಿಶ್ವವಿದ್ಯಾನಿಲಯದ ಕುಲಪತಿಗಳಾದಪ್ರೊ.ಬಿ.ರಮೇಶ್‌ರವರು ಮಾತನಾಡಿ, ಸಾಂವಿಧಾನಿಕ ಮೌಲ್ಯಗಳು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಸಂರಕ್ಷಣೆಯ ಹೊಣೆಯನ್ನು ನಿರ್ವಹಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸಹಿಷ್ಣುತೆಯ ಆದರ್ಶಗಳನ್ನು ಜೀವನಮಾರ್ಗವಾಗಿ ಅಳವಡಿಸಿಕೊಂಡು ಜಾತಿ, ಮತ, ಭಾಷೆಗಳ ಸಂಘರ್ಷದ ತಲ್ಲಣಗಳಿಂದ ದೇಶದ ಐಕ್ಯತೆಯನ್ನು ಸಂರಕ್ಷಿಸುವಂತೆ ಅವರು ಮನವಿ ಮಾಡಿದರು. ಪ್ರಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ವಿದ್ವಾಂಸರಾದ ಡಾ.ಕೆ.ಎಸ್.ವೈಶಾಲಿಯವರು ಸಮಷ್ಟಿ ಪ್ರಜ್ಞೆಯ ಪ್ರತೀಕವಾದ ಭಜನೆಗಳನ್ನು ಸುಶ್ರಾವ್ಯವಾಗಿ ಹಾಡಿ ಮಹಾತ್ಮ ಗಾಂಧೀಜಿಯವರಿಗೆ 'ಸಂಗೀತ ನಮನ' ಸಲ್ಲಿಸಿದರು. ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್.ಬಿ. ಕುಡೇನಟ್ಟಿ, ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ ಜ್ಯೋತಿ ವೆಂಕಟೇಶ್ ಹಾಗೂ ಮೌಲ್ಯಮಾಪನ ವಿಭಾಗದ ಉಪ ಕುಲಸಚಿವರಾದ ಪ್ರೊ. ಕೆ.ಆರ್.ಜಲಜಾ ಮತ್ತು ಪ್ರೊ. ಮೇಧಾ ಇಟಗಿ ಹುಯಿಲಗೋಳ ಉಪಸ್ಥಿತರಿದ್ದರು. ಡಾ. ಮಾಲಿನಿ.ಎಂ. ಕಾರ್ಯಕ್ರಮ ನಿರೂಪಿಸಿದರು. ಗಾಂಧೀಜಿಯವರ ಜೀವನ ಮತ್ತು ಸಾಧನೆಯ ಕುರಿತಾದ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.



ಹುತಾತ್ಮ ದಿನಾಚರಣೆಯ ಅಂಗವಾಗಿ ರಾಷ್ಟ್ರಪಿತನಿಗೆ ಸಂಗೀತ ನಮನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು

## ಇತಿಹಾಸ ಬೋಧನೆಗೆ ವೈಜ್ಞಾನಿಕ ದೃಷ್ಟಿಕೋನ

ವರದಿ: ಡಾ. ಮಾಲಿನಿ. ಎಂ.

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಇತಿಹಾಸ ವಿಭಾಗ ಹಾಗೂ ಆಲ್ ಇಂಡಿಯಾ ಸೇವ್ ಎಜುಕೇಶನ್ ಕಮಿಟಿಯ ಜಂಟಿ ಸಹಯೋಗದಲ್ಲಿ 'ಇತಿಹಾಸ ಬೋಧನೆಗೆ ವೈಜ್ಞಾನಿಕ ದೃಷ್ಟಿಕೋನ' ಎಂಬ ವಿಷಯ ಕುರಿತ ಸಂವಾದ ಕಾರ್ಯಕ್ರಮವನ್ನು ಜನವರಿ 25ರಂದು ಆಯೋಜಿಸಲಾಗಿತ್ತು. ಖ್ಯಾತ ಇತಿಹಾಸಕಾರರು ಹಾಗೂ ಶಿಕ್ಷಣ ತಜ್ಞರು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಆದಿತ್ಯ ಮುಖರ್ಜಿಯವರು, ನಾಗರಿಕ ಸ್ವಾತಂತ್ರ್ಯವು ಪ್ರಜಾಸತ್ತಾತ್ಮಕ ಪರಂಪರೆಯ ಅವಿಭಾಜ್ಯ ಅಂಗವಾಗಿದ್ದು, ವಿಮರ್ಶೆಯನ್ನು ರಾಷ್ಟ್ರವಿರೋಧಿಯಾಗಿ ಪರಿಗಣಿಸುವುದು ಸರಿಯಲ್ಲವೆಂದು ತಿಳಿಸಿದರು. ಭಾರತವು ಬಹುಸಾಂಸ್ಕೃತಿಕ ಮತ್ತು ಬಹುಮತೀಯ ಸ್ವಭಾವ ಹೊಂದಿದ ದೇಶವಾಗಿದ್ದು, ರಾಜಕೀಯ ಉದ್ದೇಶಗಳಿಗೆ ಇತಿಹಾಸವನ್ನು ದುರುಪಯೋಗಪಡಿಸಿಕೊಳ್ಳುವ ಪ್ರವೃತ್ತಿಯ ಬಗ್ಗೆ ಎಚ್ಚರಿಕೆ ನೀಡಿದರು.

ಐಐಎಸ್‌ಇಆರ್, ಕೊಲ್ಕತ್ತಾದ ಮಾಜಿ ನಿರ್ದೇಶಕರಾದ ಪ್ರೊ.ಸೌಮಿತ್ರ ಬ್ಯಾನರ್ಜಿಯವರು ಮಾತನಾಡಿ, ಇತಿಹಾಸ ಸಾಕ್ಷ್ಯಾಧಾರಿತ, ವಿಚಾರಣೆ ಮತ್ತು ಪರಿಶೀಲನೆಗಳ ಮೇಲೆ ಆಧಾರಿತವಾದ ವೈಜ್ಞಾನಿಕ ವಿಷಯವಾಗಿದ್ದು, ಇತ್ತೀಚಿನ ದಿನಗಳಲ್ಲಿ ವಿಕೃತ ಇತಿಹಾಸ ಕಥನಗಳ ಹರಡುವಿಕೆಯು ಹೆಚ್ಚುತ್ತಿರುವುದು ಆತಂಕಕಾರಿ ವಿಷಯವೆಂದು ತಿಳಿಸಿದರು. ಪ್ರೊ. ಮೃದುಲಾ ಮುಖರ್ಜಿಯವರು, ರಾಜಕೀಯ ಪ್ರಭಾವಿತ ಪಠ್ಯಪುಸ್ತಕಗಳು ಮತ್ತು ಪಠ್ಯಕ್ರಮ ಇತಿಹಾಸದ ಸಮುದಾಯಾಧಾರಿತ ವಿಕೃತೀಕರಣಕ್ಕೆ ಕಾರಣವಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಲ್ಲಮಪ್ರಭು ಬೆಟ್ಟದೂರು, ಮನುವಾದವನ್ನು ಪ್ರಶ್ನಿಸುವ ಅಗತ್ಯವಿದೆ ಹಾಗೂ ಸಮಾಜದಲ್ಲಿ ವಿಭಜನೆ ಉಂಟುಮಾಡುವ ಅವೈಜ್ಞಾನಿಕ ಮತ್ತು ಅತಾರ್ಕಿಕ ಆಲೋಚನೆಗಳನ್ನು ಪ್ರಶ್ನಿಸುವುದು ಅಗತ್ಯವೆಂದು ಪ್ರತಿಪಾದಿಸಿದರು.

ಎಐಎಸ್‌ಇಸಿನ ರಾಜಶೇಖರ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಫ್ರಾನ್ಸಿಸ್ ಅಲ್ಮೇಡಾ ಉಪಸ್ಥಿತರಿದ್ದರು.

## ಸ್ತ್ರೀ ಶಿಕ್ಷಣದ ರೂವಾರಿ ಸಾವಿತ್ರಿಬಾಯಿ ಪುಲೆ ಸ್ಮರಣೆ



ಸಾವಿತ್ರಿ ಬಾಯಿ ಪುಲೆಯವರ ಜನ್ಮದಿನದ ಸಂದರ್ಭದಲ್ಲಿ ಶಿಕ್ಷಕಿಯರ ದಿನಾಚರಣೆ

ಪ್ರಪ್ರಥಮ ಭಾರತೀಯ ಶಿಕ್ಷಕಿ ಎಂಬ ಮನ್ನಣೆಗೆ ಪಾತ್ರರಾದ ಸ್ತ್ರೀ ಶಿಕ್ಷಣದ ರೂವಾರಿ ಮಹಾನ್ ಸಮಾಜ ಸುಧಾರಕಿ ಸಾವಿತ್ರಿ ಬಾಯಿ ಪುಲೆಯವರ ಜನ್ಮದಿನದ ಪ್ರಯುಕ್ತ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ 'ಶಿಕ್ಷಕಿಯರ ದಿನಾಚರಣೆ' ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾಮಾಜಿಕ ಕಾರ್ಯಕರ್ತೆ ಹಾಗೂ ಲೇಖಕಿ ಡಾ. ಗಾಯತ್ರಿ. ಎನ್. ಮಾತನಾಡಿ, ಬ್ರಿಟಿಷ್ ಭಾರತದಲ್ಲಿ ಸಾವಿತ್ರಿಬಾಯಿ ಪುಲೆ ನಡೆಸಿದ ಶಿಕ್ಷಣ ಕ್ರಾಂತಿಯ ಫಲವಾಗಿ ಇಂದು ಸ್ತ್ರೀಯರು ಅಧಿಕ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಪಡೆಯುವ ಅವಕಾಶ ಲಭ್ಯವಾಗಿದೆ ಎಂದು ತಿಳಿಸಿದರು. ಚರಿತ್ರೆಯುದ್ದಕ್ಕೂ ಮಹಿಳೆಯರನ್ನು ಕಡೆಗಣಿಸಿದಂತೆ ಸಾವಿತ್ರಿಬಾಯಿ ಪುಲೆಯವರ ಸ್ತ್ರೀ ಸಬಲೀಕರಣದ ಕೊಡುಗೆಯನ್ನು ಸಹ ಬಹಳ ತಡವಾಗಿ ಸ್ಮರಿಸಲಾಗುತ್ತಿದೆ ಎಂದು ಅವರು ವಿಶ್ಲೇಷಿಸಿದರು. ಬಾಲ್ಯ ವಿವಾಹ, ಬಾಲ ವಿಧವೆಯರ ಸಮಸ್ಯೆಗಳು ಹೊಸ ಸ್ವರೂಪದಲ್ಲಿ ಕಾಡುತ್ತಿದ್ದು ಭ್ರೂಣ ಹತ್ಯೆ, ಬಾಲಗರ್ಭಿಣಿಯರ ಸಮಸ್ಯೆ, ಮರ್ಯಾದೆ ಹತ್ಯೆ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡುವ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್ .ಬಿ. ಮಾತನಾಡಿ, ಹೆಣ್ಣುಮಕ್ಕಳನ್ನು ಕಡಿಮೆ ಖರ್ಚಿನ ಸಾಮಾನ್ಯ ಶಿಕ್ಷಣಕ್ಕೆ ಸೀಮಿತಗೊಳಿಸುವ ಪೋಷಕರ ಮನೋಭಾವ ಬದಲಾಗಬೇಕೆಂದು ಅಭಿಪ್ರಾಯಪಟ್ಟರು. ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಸದ್ಯ ಹೆಣ್ಣುಮಕ್ಕಳು ಶೇಕಡ 70ರಷ್ಟು ಸಂಖ್ಯೆಯಲ್ಲಿದ್ದರೂ ವೃತ್ತಿಪರ ಶಿಕ್ಷಣದ ಅವಕಾಶಗಳಿಂದ ಸಾಕಷ್ಟು ವಂಚಿತರಾಗಿದ್ದಾರೆಂದು ಅವರು ವಿವರಿಸಿದರು. ಭಾರತದ ಸಂವಿಧಾನ ರಚನೆಗೆ ನೂರು ವರ್ಷಗಳ ಮೊದಲೇ ಹೆಣ್ಣುಮಕ್ಕಳಿಗಾಗಿ ಶಾಲೆ ತೆರೆದು ಮಹಿಳಾ ಜಾಗೃತಿಗೆ ನಾಂದಿ ಹಾಡಿದ ಸಾವಿತ್ರಿಬಾಯಿ ಮತ್ತು ಜ್ಯೋತಿಬಾ ಪುಲೆ ದಂಪತಿಗಳ ಸಾಮಾಜಿಕ ಸಮಾನತೆಯ ಆದರ್ಶ ಅವಿಸ್ಮರಣೀಯವೆಂದು ಅವರು ಬಣ್ಣಿಸಿದರು. ಸಿಂಡಿಕೇಟ್ ಸದಸ್ಯರಾದ ಆಯಿಷಾ ಫರ್ಜಾನ ಮಾತನಾಡಿ, ವರ್ಣಾಶ್ರಮ ಧರ್ಮ ವ್ಯವಸ್ಥೆಯಲ್ಲಿ ಆದಂತೆಯೇ ಅಲ್ಪಸಂಖ್ಯಾತ ಸಮುದಾಯಗಳಲ್ಲೂ ಸ್ತ್ರೀಯರು ಅಪಾರ ಶೋಷಣೆಗೆ ಗುರಿಯಾಗಿದ್ದು ಒಟ್ಟಾರೆ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಸಬಲೀಕರಣಕ್ಕಾಗಿ ಹೋರಾಟವನ್ನು ತೀವ್ರಗೊಳಿಸಬೇಕಿದೆ ಎಂದು ಪ್ರತಿಪಾದಿಸಿದರು.

ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಮೇಧಾ ಇಟಗಿ ಹುಯಿಲಗೋಳ ಪ್ರಾಸ್ತಾವಿಕ ಭಾಷಣ ಮಾಡಿದರು. ವಾಣಿಜ್ಯ ನಿಕಾಯದ ಡೀನರಾದ ಪ್ರೊ.ಕೆ.ಆರ್. ಜಲಜಾ, ಸಿಂಡಿಕೇಟ್ ಸದಸ್ಯರಾದ ಶಿಲ್ಪಶ್ರೀ, ಡಾ .ಎಚ್. ಕೃಷ್ಣರಾಮ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ನಂದಕಿಶೋರ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕನ್ನಡ ವಿಭಾಗದ ಉಪನ್ಯಾಸಕರಾದ ಡಾ.ಅಖ್ತರ್. ಎಸ್. ಕಾರ್ಯಕ್ರಮ ನಿರೂಪಿಸಿದರು. ಡಾ. ಮಂಜು. ಸಿ.ಎನ್. ಮತ್ತು ಸೌಮ್ಯ ಜಾಗೃತಿ ಗೀತೆಗಳನ್ನು ಹಾಡಿದರು. ಸಮಾಜಕಾರ್ಯ ವಿಭಾಗದ ಡಾ.ಸುಜಾತಾ ಅತಿಥಿಗಳನ್ನು ಪರಿಚಯಿಸಿರು. ವಾಣಿಶ್ರೀ. ಎಂ. ಸ್ವಾಗತಿಸಿ, ನೇತ್ರಾವತಿ ವಂದಿಸಿದರು.

## ರಾಷ್ಟ್ರೀಯ ಮತದಾರರ ದಿನಾಚರಣೆ

ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಜನವರಿ 23ರಂದು ಜ್ಞಾನಜ್ಯೋತಿ–ಸೆಂಟ್ರಲ್ ಕಾಲೇಜ್ ಕ್ಯಾಂಪಸ್ ಆವರಣದಲ್ಲಿ ಕುಲಪತಿಗಳಾದ ಪ್ರೊ. ರಮೇಶ್.ಬಿ. "ನನ್ನ ಭಾರತ ನನ್ನ ಮತ" ಪ್ರತಿಜ್ಞಾ ವಿಧಿ ಬೋಧಿಸಿದರು. ಕುಲಸಚಿವರಾದ ನವೀನ್ ಜೋಸೆಫ್, ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿ ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

## ಯುವ ದಿನಾಚರಣೆ–ಉಚಿತ ಆರೋಗ್ಯ ಶಿಬಿರ

–ಪುನೀತ್ ಡಿ.

ಸ್ವಾಮಿ ವಿವೇಕಾನಂದರ 163ನೇ ಜಯಂತಿಯ ಪ್ರಯುಕ್ತ ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವತಿಯಿಂದ ಸೆಂಟ್ರಲ್ ಕಾಲೇಜಿನ ರಾಜಾಜಿ ಹಾಲ್‌ನಲ್ಲಿ ಜನವರಿ 12ರಂದು ರಾಷ್ಟ್ರೀಯ ಯುವ ದಿನಾಚರಣೆ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಅವರು ಸ್ವಾಮಿ ವಿವೇಕಾನಂದರ ಶಿಕ್ಷಣದ ಪರಿಕಲ್ಪನೆ ವಿಶ್ವವಿದ್ಯಾಲಯಗಳಿಗೆ ಇಂದಿಗೂ ಮಾದರಿಯಾಗಿದೆ ಎಂದು ತಿಳಿಸಿದರು. ಶಿಕ್ಷಣ ವ್ಯವಸ್ಥೆ ಕೇವಲ ಮಾಹಿತಿ ಸಂಗ್ರಹ ಮತ್ತು ಉದ್ಯೋಗ ಗಳಿಕೆಗೆ ಸೀಮಿತವಾಗದೆ ಮಾನವ ಸಾಮರ್ಥ್ಯ ಅಭಿವೃದ್ಧಿ ಹಾಗೂ ಉತ್ತಮ ಚಾರಿತ್ರ್ಯದ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾದ ಸಾಧನವಾಗಬೇಕೆಂಬ ವಿವೇಕಾನಂದರ ಆಶಯ ಅತ್ಯಂತ ಪ್ರಸ್ತುತವಾಗಿದೆ ಎಂದು ಅವರು ವಿಶ್ಲೇಷಿಸಿದರು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿವರ್ಗದ ಅನುಕೂಲಕ್ಕಾಗಿ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಭಾರತೀಯ ವೈದ್ಯಪದ್ಧತಿಯ 'ಯೋಗಕ್ಷೇಮ ಕೇಂದ್ರ' ಪ್ರಾರಂಭಿಸುವ ಉದ್ದೇಶವನ್ನು ಕುಲಪತಿಗಳು ಇದೇ ವೇಳೆ ಪ್ರಕಟಿಸಿದರು. ಹಿರಿಯ ಆಯುರ್ವೇದ ವೈದ್ಯ ಮತ್ತು ಸಿಂಡಿಕೇಟ್ ಸದಸ್ಯರಾದ ಡಾ.ಅಬ್ದುಲ್ ಖಾದರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಪರೀಕ್ಷಾ ಒತ್ತಡ ನಿರ್ವಹಣೆಯ ಜೊತೆಗೆ ಹೆಣ್ಣುಮಕ್ಕಳಿಗೆ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಸೂಕ್ತ ಮಾರ್ಗದರ್ಶನದ ಭರವಸೆಯಿತ್ತರು. ಕುಲಸಚಿವರಾದ ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್ ಬಿ. ಕುಡೇನಟ್ಟಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ. ಕೆ. ಶಿವಶಂಕರ್, ಸಿಂಡಿಕೇಟ್ ಸದಸ್ಯರಾದ ಡಾ.ಎಚ್.ಕೃಷ್ಣರಾಮ್, ಡಾ. ಬಿ.ಆರ್.ಸುಪ್ರೀತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮಾರಂಭದ ಅಂಗವಾಗಿ 'ಅಭಿ–ಆಯುರ್ ಪ್ರತಿಷ್ಠಾನ'ದ ಪ್ರಾಯೋಜಕತ್ವದಲ್ಲಿ ವಿದ್ಯಾರ್ಥಿಗಳು ಮತ್ತು ಬೋಧ'ಕ–ಬೋಧ'ಕೇತರ ಸಿಬ್ಬಂದಿಗೆ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಉಪನ್ಯಾಸಕರಾದ ಡಾ. ಮಂಜು. ಸಿ.ಎನ್. ಕಾರ್ಯಕ್ರಮ ನಿರೂಪಿಸಿದರು. ಡಾ. ಗೋಪಿ. ಎಸ್.ಎಂ. ಸ್ವಾಗತಿಸಿ ಡಾ. ನಾಗರಾಜ್. ಆರ್.ಕೆ. ವಂದಿಸಿದರು. ಸೌಮ್ಯ ವಿಶ್ವವಿದ್ಯಾನಿಲಯದ ಆಶಯ ಗೀತೆ ಹಾಡಿದರು.



ಯುವದಿನಾಚರಣೆ ಪ್ರಯುಕ್ತ ಆಯುರ್ವೇದ ಆರೋಗ್ಯ ಶಿಬಿರದಲ್ಲಿ ಉಚಿತ ತಪಾಸಣೆ

# NEXUS EDGE 2026 – Management Conclave




Nexus Edge 2026 Management Concalve inauguration ceremony at JJ auditorium

Nexus Edge 2026, an Industry Governance and Management Conclave, was organized at Jnana Jyothi Auditorium under the joint auspecies of Dr. Manmohan Singh Bangalore City University School of Management Studies (BCUSMS) and International Institute of Business Studies (IIBS) with the active participation of all affiliated Management colleges.

Addressing the gathering as the Chief Guest, Vice-Chancellor Prof. Ramesh B. emphasized the need for a revolutionary transformation in the education system in tune with the present era of digitalization and the adoption of artificial intelligence.

He explained that the University has already initiated the process of revising curricula to align with the emerging needs of the industry. In this direction, employability skill development and pre-examination training programs are being organized, and direct placement opportunities are being created through collaborations with various industry organizations. He urged students to go beyond merely earning degrees and to equip themselves with advanced technological skills and entrepreneurial abilities to build a strong future for themselves.

Delivering the keynote address, T.R. Parasharaman, Chairman of the ASSOCHAM, Karnataka State Development Council, stated that the next decade will be dominated by technology-driven governance. He analyzed that India's economy is gradually shifting from a service-sector–centric model towards manufacturing, opening up significant opportunities and a golden era for micro, small, and medium enterprises. He also advised students to develop not only technical expertise, digital skills, and the ability to use artificial intelligence, but also to cultivate good conduct and professional ethics.

IIBS Chairman Dr. Jaiprakash and ZOHO Director Rajalakshmi Srinivasan also addressed the students. Dr. Nirmala M., Director, BCUSMS. presided over the program. Registrar (Evaluation) Ramesh B. Kudenatti, Finance Officer M. V. Vijayalakshmi, and IIBS Principal Dr. Tripuraneni Jaggaiah were present on the dais. Prof. Ritika Sinha delivered the introductory address.

Special lectures by experts on various topics such as- synergy for skill empowerment, career interface, leadership insights- were organized as part of the conference.

# Civil Services Examination Training Centre-MARGA

-Dr. Srinivasa C N



Inauguration of MARGA by Prof Purushotham Bilimale and other dignitaries

Dr. Manmohan Singh Bengaluru City University has launched a free Civil Services Examination Training Centre to support students from rural and economically weaker family backgrounds. Prof. Purushottam Bilimale, Chairman, Kannada Development Authority, formally inaugurated the centre at Jnanajyoti Auditorium, Central College campus on 8th January, 2026.

Speaking on the occasion, Prof. Bilimale appreciated the University's 'MARGA' initiative and said that it is commendable to provide skill development and competitive examination training at a time when traditional curricula and teaching methods are no longer sufficient to shape students' career paths.

He opined that by designing academic programmes aligned with industry requirements and by offering appropriate guidance and training, meaningful support can be extended to the student community. He noted that social justice has become elusive due to the shrinking of government job opportunities and the absence of reservation benefits in the private sector.

He further analysed that the policy of establishing one university per district in Karnataka has pushed public universities into a serious crisis, owing to financial constraints and delays in the recruitment of permanent faculty. He suggested that Public–Private Partnership (PPP) model could be a viable option under the present circumstances. He urged the State Government to revive the publication 'Udyoga Mitra'.

Retired IAS officer Dr.C.S. Kedar and K.A. Dayanand, Commissioner, KHB, shared their life experiences and assured their full cooperation for the University's special initiative.

Prof. A. Narayana Prasad, former State Nodal Officer (Retired) of the Department of Collegiate Education (Employment and CSR), motivated students to make effective use of the skill training opportunities.

Presiding over the programme, Vice-Chancellor Prof. Ramesh B. stated that the Civil Services offer a valuable opportunity to implement the constitutional ideals rooted in pluralism and also achieve the goal of building an egalitarian society.

Registrar A. Naveen Joseph welcomed the gathering. Prof. Medha Itagi Huyilagol, Director of the Examination Training Centre, delivered introductory remarks. Finance officer Vijaylakshmi and Syndicate member Ayesha Farzana were present. VaniShree.M. compered the programme.

## ECONOMETRICS WORKSHOP

-Dr. Rohini V S

Department of Economics organized a two-day Workshop on Basic Econometrics on 9th and 10th January 2026. Chairperson, Prof. Ritika Sinha introduced the relevance and objectives of the workshop.

Chief Guest, Vice Chancellor Prof. Ramesh B highlighted the significance of Econometrics in enhancing not only analytical and research skills but also the employability among the students. Resource person Dr. S. Manjunatha explained about the interdisciplinary role of econometrics as a distinguished study area. Totally 6 technical sessions were held including demonstrations along with training and exercises. Students from St. Joseph, Christ, Mount Carmel, GFGC, Govt Arts College and also research scholars from Mysore, Ramanagara, Bangalore Universities actively participated in the programme.

## Workshop on Sociological Approaches

-Dr. Savitha B C

The Department of Sociology organised a workshop on Sociological Approaches and Skill Development on 13th January 2026. Prof. Anand Inbanathan former professor of Sociology, Institute for Social Economic Change (ISEC), inaugurated the workshop and Prof Rajesh.R, Bangalore University, presided over the programme.

The chairperson of the Department Prof Nirmala M, Academic coordinator of Dr. MSBCU Dr..Thandava Gowda and Prof M.P. Nagendra, Government Arts College were also present.

Prof. Inbanathan spoke about Research methods and Techniques to be adopted by the students and to update their skills according to the demand of the society. He also stressed on enhancing the writing skills among students so that their thoughts and ideas can be examined in best and can be published in various platforms.

Prof Rajesh.R. specifically focused on how Sociological writings and publications skill can be developed among students from scratch to advanced level. He expressed that students can be agents of social change and become social entrepreneurs.

Government Arts College and Maharani Cluster University students also participated in the workshop and gained insights from various technical sessions.

## Special Lecture on AI

Department of Chemistry under the aegis of Chemical Society, in association with DOSR in Computer Technology, organized an invited lecture on 'AI for Research Scholars' on 13th January 2026. Dr.S.S.Iyengar, Ryder Professor, US Army Center of excellence in Cyber Security and Artificial Intelligence, Florida University,USA.shared his vast academic and research experience and also highlighted the growing importance of Artificial Intelligence in higher education and research.

He explained how AI tools can support research scholars in literature review, data handling, analysis, and innovation. The session was highly informative and interactive, encouraging participants to adopt AI-based approaches in their research work.

**Lecture Contest**

Chemical Society and ACCCA, organized Lecture Contest commemorating late Prof. B. Sanjiva Rao, renowned academician in Chemical Sciences. Dr. Girish Rao and Dr.K N. Mahendra, emphasized the value of scientific inquiry and effective communication. Postgraduate students delivered lectures on diverse topics.

# ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಶಾಸನಗಳು ಹಾಗೂ ವೀರಗಲ್ಲುಗಳ ಪಾತ್ರ

**–ಡಾ. ಗೋಪಿ. ಎಸ್.ಎಂ,**

ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನದಲ್ಲಿ ನಮಗೆ ಮೊದಲು ದೊರಕುವ ಉಪಲಬ್ಧ ಸಾಹಿತ್ಯ ಮೂಲವೆಂದರೆ ಅದು ಶಾಸನಗಳು. 'ಶಾಸನಗಳು ಕನ್ನಡ ಸಾಹಿತ್ಯದ ತಲಕಾವೇರಿ. ಕನ್ನಡ ಕಾವ್ಯದ ಜಿನುಗು ಮೊಟ್ಟಮೊದಲು ಕಂಡುಬರುವುದು ಶಾಸನಗಳಲಿ' ಎಂಬ ಡಾ.ಎಂ. ಚಿದಾನಂದಮೂರ್ತಿ ಅವರ ಮಾತು ಅರ್ಥಗರ್ಭಿತವಾದದ್ದು. ಕೇವಲ ಕನ್ನಡ ಸಾಹಿತ್ಯವಷ್ಟೇ ಅಲ್ಲದೇ ಪ್ರಪಂಚದಾದ್ಯಂತ ಎಲ್ಲಾ ಸಾಹಿತ್ಯ ಕಲೆಗಳ ಮೂಲ ಆಕರ ಸಾಮಗ್ರಿ ಬಹುತೇಕ ಶಿಲಾಶಾಸನ ರೂಪಗಳೇ ಆಗಿರುವುದು ಗಮನಾರ್ಹವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಪ್ರಾಚೀನ ಜನರ ಅನ್ವೇಷಣೆ, ವಿಕಾಸದ ಹಂತ, ರಾಜಕೀಯ, ಸಾಮಾಜಿಕ ಜೀವನ, ಸಂಸ್ಕೃತಿಯ ವಿವಿಧ ಮಗ್ಗುಲುಗಳನ್ನು ನಾವು ತಿಳಿಯಬೇಕೆಂದರೆ ಶಾಸನಗಳ ಮೊರೆ ಹೋಗಬೇಕಾದುದು ಅಗತ್ಯ ಹಾಗೂ ಅನಿವಾರ್ಯ ಪ್ರಕ್ರಿಯೆಯಾಗಿದೆ. ಇವುಗಳು ಲಭ್ಯವಿರುವ ನಂಬಲರ್ಹ ಮೂಲವಾಗಿರುವುದು ಇದರ ಮಹತ್ವವನ್ನು ಸಾರುವಂತಿದೆ.

ಶಾಸನಗಳನ್ನು ತಾಮ್ರಶಾಸನ ಮತ್ತು ಶಿಲಾಶಾಸನ ಎಂದು ವಿಂಗಡಿಸುವುದಲ್ಲದೆ ಅವುಗಳ ಗುಣಲಕ್ಷಣಗಳಿಗೆ ಅನುಸಾರವಾಗಿ ಪ್ರಶಸ್ತಿ ಶಾಸನ, ದಾನ ಶಾಸನ, ವೀರಗಲ್ಲು, ಮಾಸ್ತಿಕಲ್ಲು, ನಿಷಧಿಗಲ್ಲು ಎಂಬುದಾಗಿ ವರ್ಗೀಕರಿಸಿಕೊಳ್ಳಬಹುದು. ಹೀಗೆ ಶಾಸನಗಳು ಅಂದಿನ ಸಮಾಜದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವಿದ್ಯಮಾನಗಳನ್ನು ತನ್ನೊಳಗೆ ಗರ್ಭೀಕರಿಸಿಕೊಂಡಿದೆ. ಶಾಸನಗಳು ಕೇವಲ ವರದಿ ರೂಪದ ಸಾಹಿತ್ಯವಲ್ಲದೆ, ಕಾವ್ಯಾತ್ಮಕ ಮೌಲ್ಯವನ್ನು ಒಳಗೊಂಡಿದ್ದು, ಹಲವಾರು ಕವಿಗಳು ಸಹ ಶಾಸನ ನಿರ್ಮಾಣದಲ್ಲಿ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ತಮ್ಮ ಛಾಪನ್ನು ಮೂಡಿಸಿದ್ದಾರೆ. 'ಸಾಮಾನ್ಯವಾಗಿ ಪ್ರಶಸ್ತಿ ಶಾಸನಗಳನ್ನು ಬಹುಪ್ರಸಿದ್ಧರಾದ ಕವಿಗಳು ರಚಿಸುತ್ತಿದ್ದರು. ತಾಳಗುಂದ ಶಾಸನವನ್ನು 'ಕುಬ್ಜ' ಎನ್ನುವವನೂ ಐಹೊಳೆಯ ಶಾಸನವನ್ನು 'ರವಿಕೀರ್ತಿ' ಎನ್ನುವವನು ರಚಿಸಿದ್ದಾರೆ. ರವಿಕೀರ್ತಿ ಪ್ರತಿಭೆಯಲ್ಲಿ ಕಾಳಿದಾಸಾದಿಗಳಿಗೆ ಸಮವೆಂದು ಹೇಳಿಕೊಂಡಿದ್ದಾನೆ. ಪ್ರಶಸ್ತಿ ಶಾಸನಗಳನ್ನು ಬಹು ಪ್ರಸಿದ್ಧರಾದ ಕವಿಗಳು ರಚಿಸುತ್ತಿದ್ದುದರಿಂದ ಪ್ರೌಢಕಾವ್ಯಗಳಲ್ಲಿ ಕಂಡುಬರುವ ಶ್ಲೇಷೆ, ಅಲಂಕಾರ ಮೊದಲಾದವೂ ಅಲ್ಲಿನ ಪದ್ಯ ಜಾತಿಗಳೂ ಪ್ರಶಸ್ತಿ ಶಾಸನಗಳಲ್ಲಿ ಕಂಡುಬರುತ್ತದೆ. ಪ್ರಶಸ್ತಿ ಶಾಸನಗಳು ನಾಡಿನ ರಾಜಕೀಯ ಇತಿಹಾಸವನ್ನು ಪುನರ್ ರಚಿಸುವಲ್ಲಿ ಬಹುವಾಗಿ ನೆರವಿಗೆ ಬರುತ್ತದೆ. ಆದರೆ ಈ ಪ್ರಶಸ್ತಿ ಶಾಸನಗಳನ್ನು ರಚಿಸಿದವರು ಆಯಾ ರಾಜರ ಆಶ್ರಿತರಾಗಿದ್ದುದರಿಂದ ಉತ್ಪ್ರೇಕ್ಷೆ ಸಹಜವಾಗಿಯೇ ಇರುತ್ತದೆ. ಆದ್ದರಿಂದ ಇತಿಹಾಸಕಾರನಾದವನು ಬಹು ಎಚ್ಚರಿಕೆಯಿಂದ ಇಲ್ಲಿನ ಇತಿಹಾಸದ ಅಂಶಗಳನ್ನು ಆಯ್ದುಕೊಳ್ಳಬೇಕಾಗುತ್ತದೆ'.

ವೀರ, ಶೌರ್ಯ ಪರಾಕ್ರಮಗಳ ಕೇಂದ್ರಬಿಂದುವಾಗಿರುವ ವೀರಗಲ್ಲುಗಳು ನಾಡಿನಾದ್ಯಂತ ಕಂಡುಬರುತ್ತವೆ. ಈ ವೀರಗಲ್ಲುಗಳು ಅಂದಿನ ಕಾಲದ ಜೀವನ ಮೌಲ್ಯಗಳನ್ನು ಬಿಂಬಿಸುವ ಹಿನ್ನೆಲೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಅಂದಿನ ಕಾಲದ ವೀರರು ತಮ್ಮ ಪ್ರಾಂತ್ಯದ ಉಳಿವಿಗಾಗಿ ಶತ್ರುಗಳೊಂದಿಗೆ ಕಾದಾಡುತ್ತ ವೀರಮರಣವನ್ನಪ್ಪಿದರೆ ಅವರ ನೆನಪಿನ ದ್ಯೋತಕವಾಗಿ ಇವು ನಿರ್ಮಾಣವಾಗುತ್ತಿದ್ದವು. ಹೆಣ್ಣುಮಕ್ಕಳ ಪ್ರಾಣ, ಮಾನರಕ್ಷಣೆಗಾಗಿ,ಸಾಕುಪ್ರಾಣಿಗಳ ರಕ್ಷಣೆ – ಹೀಗೆ ಹಲವಾರು ವಿಧದ ಉಪಾಧಿಗಳಿಂದ ತಮ್ಮ ನಾಡಿನ ಜನರನ್ನು ರಕ್ಷಿಸಲು ಪ್ರಾಣಾರ್ಪಣೆ ಮಾಡಿದ ವೀರರ ಸ್ಮಾರಕಗಳೇ ಈ ವೀರಗಲ್ಲುಗಳು. ಮಾಸ್ತಿಕಲ್ಲುಗಳು ಶಾಸನಾಧ್ಯಯನದ ದೃಷ್ಟಿಯಿಂದ ಬಹುಮುಖ್ಯ ಪ್ರಕಾರವಾಗಿವೆ. ಗಂಡ ಸತ್ತಾಗ, ಅವನ ಜೊತೆ ಚಿತೆಯೇರುತ್ತಿದ್ದವಳು ಮಹಾಸತಿಯಾಗುತ್ತಿದ್ದಳು. ಅವಳ ನೆನಪಾರ್ಥವಾಗಿಯೇ ಈ ಮಾಸ್ತಿಕಲ್ಲುಗಳು ನಿರ್ಮಾಣಗೊಳ್ಳುತ್ತಿದ್ದವು. ಹೀಗೆ ಅಂದಿನ ಕನ್ನಡನಾಡಿನ ಜನಜೀವನ, ವೀರತ್ವ, ತ್ಯಾಗ–ಬಲಿದಾನ, ಕಲೆ ಸಾಹಿತ್ಯ, ಭಕ್ತಿ ವೈರಾಗ್ಯ ಮೊದಲಾದ ವೈವಿಧ್ಯಮಯ ಸಂಗತಿಗಳನ್ನು ಶಾಸನಾಧ್ಯಯನ ಒದಗಿಸಿ ಕೊಡುತ್ತದೆ.

## Penang Delegation visit– Proposal for Academic Collaboration



DMSBCU Vice Chancellor with Penang Delegates

A high-level delegation led by Mr.Jagdeep Singh Deo, Deputy Chief Minister of the island state of Penang, Malaysia,visited Dr.ManmohanSingh Bengaluru City University on 5th January 2026. VC Prof. Ramesh B. and Registrar A. Naveen Joseph extended warm welcome to the delegation. Preliminary discussions were held on the possibilities of mutual cooperation in the areas of higher education and skill development.

Penang delegation expressed keen interest in organizing student and faculty exchange programs with the University's Global Language Centre and various departments of Science, Commerce, Management, and Computer Education. Deputy Chief Minister of Penang assured that an official memorandum of understanding would be signed at the earliest. Registrar (Evaluation) Prof. Ramesh B. Kudenatti, Finance Officer M. V. Vijayalakshmi, along with Syndicate members, Deans, and several senior professors, participated in the deliberations.

## Journalism Students' Media Visit

The Department of Mass Communication and Journalism, Dr. Manmohan Singh Bengaluru City University, organized educational field visits as part of Media Club acitivities to provide students with real-life exposure to media activities.

The first visit was organized to 'Ee Sanje' eveninger on 7th January 2026, where the students were exposed to the entire process involved in print media. The group learned about how news is collected from correspondents and news agencies, editing methods and also page designing and printing process.

The second visit was organized on 12th January 2026 at 'Zee Kannada', where the group witnessed the live recording of the popular reality show 'Comedy Kiladigalu'. This visit provided us with an insight into the production process of a reality show on television, including the setting, camera positioning, lighting, and sound synchronization.

## DMS-BCU HOCKEY TEAM TRIUMPH

Dr.Mnmohan Singh Bengaluru City University Hockey men team has secured Bronze medal in South Zone Inter University tournament held at Satyabama Institute of Science & Technology, Tamilnadu from 13th to 19th January 2026.

In the meanwhile the team has performed superbly in All India Inter Univesrity tournament held at Sambalpur University from 22nd to 27th January 2026 and has been successfully qualified for Khelo India University Games.

**Athletics Tournament**

Dr.Mnmohan Singh Bengaluru City University student Dasharath Ninga Talwar has secured third place and clinched Bonze medal in Mens 20 km Race Walk event at 85th All India Inter Univesrity Athletics Championships 2025-26 held at Moodubidire, Dakshina Kannada District from 12th to 16th January 2026.


DMS-BCU Hockey men team won Bronze medal in South Zone Inter University tournament

## BCUSMS Students visit IMTEX-2026

**-Dr. Shreesha R**

Students of MBA (Marketing) program from BCUSMS undertook an enriching industry immersion visit to IMTEX Forming 2026 at Bangalore International Exhibition Centre (BIEC). The visit was designed to help students understand the nuances of Business-to-Business (B2B) markets through direct exposure to India's premier manufacturing technology exhibition.

IMTEX Forming 2026 brought together leading players from machine tools, forming technologies, automation, robotics, welding, and digital manufacturing. Walking through the exhibition halls, students team engaged with exhibitors and industry professionals to observe complex buying processes, solution selling, long sales cycles, and relationship-driven marketing—all hallmarks of B2B markets.

Faculty mentors emphasized connecting observations from IMTEX to core MBA marketing concepts such as organizational buying behavior, key account management, industrial branding, and channel relationships. The experience strengthened students' appreciation of how marketing strategies differ in industrial contexts compared to consumer markets.

**ಸಂಪಾದಕೀಯ ಮಂಡಳಿ**
**ಡಾ. ಟಿ. ಎನ್. ತಾಂಡವ ಗೌಡ,**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ,**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**
**ಪ್ರೊ. ರಮೇಶ್. ಬಿ,**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ,**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ್.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ ,**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ,**
ಡೀನರು, ವಾಣಿಜ್ಯ ನಿಕಾಯ.
**ಪ್ರೊ. ಜ್ಯೋತಿ ವೆಂಕಟೇಶ್,**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ,**
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**
**ಮೋಹನ್ ವಿ,** ಎಂಸಿಜೆ, ದ್ವಿತೀಯ
**ಉಷಾರಾಣಿ,** ಎಂಸಿಜೆ, ಪ್ರಥಮ
**ಸೌಂದರ್ಯ,** ಎಂಸಿಜೆ, ದ್ವಿತೀಯ

**ತಿಂಗಳ ಬುತ್ತಿ**

**08/02/2026 – 10/02/2026**
Bengaluru Water Expo
**20/02/2026 – 26/02/2026**
ರಾಷ್ಟ್ರೀಯ ಭಾವೈಕ್ಯತಾ ಶಿಬಿರ

**ಭಾವಪೂರ್ಣ ಶ್ರದ್ಧಾಂಜಲಿ**


**ಎಂ.ಆರ್. ಜನಾರ್ಧನ್**

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಆಡಳಿತ ವಿಭಾಗದ ಅಧೀಕ್ಷಕರಾಗಿ ನಿವೃತ್ತರಾದ ಬಳಿಕ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯುದ ಸಂಪತ್ತಿ ವಿಭಾಗದಲ್ಲಿ ಸಮಾಲೋಚಕರಾಗಿ ಕಾರ್ಯನಿರ್ವಹಿಸುತ್ತಿದ್ದ ಎಂ.ಆರ್. ಜನಾರ್ಧನ್ ರವರು ಜನವರಿ 16ರಂದು ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ

**IMPORTANT NOTE**
Visit Dr Manmohan Singh Bengaluru City Uni-versity's official website **www.bcu.ac.in** for regular updates of Univeristy activities and also read ANIKETANA. Send Reports/Photos to **E-mail id : aniketana@bcu.ac.in**

**Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001**